ಪಡೆಯುತ್ತಿದ್ದವು.

ತಂದೆಯ ಮರಣದ ನಂತರದ ದಿನಗಳಲ್ಲಿ ರಜೆಗೆಂದು ಊರಿಗೆ ಬಂದಾಗಲೆಲ್ಲ ತನ್ನ ಮನೆಯ ಪರಿಸ್ಥಿತಿ ಕೆಡುತ್ತ ಹೋಗಿರುವುದನ್ನು ಅವನು ಗಮನಿಸಿದ್ದ. ಒಮ್ಮೆ ತಾನು ತನ್ನ ಕಾಲ ಮೇಲೆ ನಿಂತೆನೆಂದರೆ ತಾಯಿ-ಸಹೋದರ-ಸಹೋದರಿಯರಿಗೆ ಬಿಡುಗಡೆ ಕೊಡಿಸುವೆನೆಂಬ ಭರವಸೆ ಕೊಡುತ್ತಲೇ ಇರುತ್ತಿದ್ದ. ಮುಂದೆ ಹಾಗೆ ಮಾಡಿಯೂ ಮಾಡಿದ. ಅದಕ್ಕಾಗಿ ಏನೇನು ಮಾಡಬೇಕೋ ಅದಕ್ಕಿಂತ ಹೆಚ್ಚಿನದೆಲ್ಲ ಮಾಡಿದ. ಊರಲ್ಲಿ ತಾನೊಂದು ಜನವಾಗಬೇಕು, ಎಲ್ಲರ ಕಣ್ಣು ಕುಕ್ಕುವಂತೆ ಬದುಕು ಸಾಗಿಸಬೇಕೆಂಬ ಛಲದಲ್ಲಿ ಸಕಲ ದಾರಿಗಳನ್ನೂ ತುಳಿದ. ತಪ್ಪು ಒಪ್ಪುಗಳನ್ನು ಹೊಸ ದೃಷ್ಟಿಯಿಂದ ನೋಡುವುದನ್ನು ಕಲಿತ.



ಅಂಥ ಮಹಾನ್ ದೇಶವನ್ನು ಕಟ್ಟುವ, ಇಂತಹ ಆದರ್ಶ ನಾಡನ್ನು ರೂಪಿಸುವ ಎಂದು ಉಮೇದಿನ ಮಾತುಗಳನ್ನು ಆಡುತ್ತಿದ್ದವನಿಗೆ, ಕಾಲೇಜು ಮುಗಿಸಿ ಬದುಕಿಗೆ ಬರುತ್ತಲೂ, ಆದರ್ಶಗಳನ್ನು ಸದ್ಯಕ್ಕೆ ಬದಿಗಿಡಬೇಕಾಗಿದ್ದನ್ನು ಅರ್ಥಮಾಡಿಕೊಳ್ಳಲು ಹೆಚ್ಚು ಸಮಯ ಹಿಡಿಯಲಿಲ್ಲ. ಆದರ್ಶಗಳೇ ಒಂದೊಂದಾಗಿ ಅವನ ಕೈಬಿಟ್ಟವೇ ಅಥವಾ ಅವನೇ ಒಂದೊಂದಾಗಿ ಅವನ್ನು ಅಪ್ರಯೋಜಕವೆಂದು ತ್ಯಜಿಸುತ್ತ ಬಂದನೇ ಎಂಬುದು ಅರಿವಾಗದಷ್ಟು ಸೂಕ್ಷ್ಮವಾಗಿ ಅವನ ವ್ಯಕ್ತಿತ್ವವು ರೂಪುಗೊಳ್ಳತೊಡಗಿತು. ಕೆಲವು ಆದರ್ಶಗಳು ಪಲ್ಲಟಗೊಂಡರೆ, ಇನ್ನು ಕೆಲವು ಎಲ್ಲೆಲ್ಲೋ ಬಿರುಕುಗಳಲ್ಲಿ, ಯಾವ್ಯಾವುದೋ ಸಂದಿಗೊಂದಿಗಳಲ್ಲಿ ಬಿದ್ದುಹೋಗಿದ್ದವು. ತನ್ನ ಮನೆಯವರಿಗಾಗಿ, ಅವರ ಉಳಿವಿಗಾಗಿ, ತನ್ನ ಏಳಿಗೆಗಾಗಿ ಅವನಿಗೆ ಹೊಸ ಬದುಕು ಕಟ್ಟಬೇಕಿತ್ತು.

ಪಾರ್ಥನ ಕಾರ್ಯತತ್ಪರತೆ, ಇದ್ದಕ್ಕಿದ್ದಂತೆ ಅವನಲ್ಲಿ ಉಂಟಾದ ಮಾರ್ಪಾಡು, ಅವನ ಜವಾಬ್ದಾರಿಯ ನಡವಳಿಕೆಗಳನ್ನು ನೋಡಿ ತುಂಬ ಸಂತಸಪಟ್ಟವಳೆಂದರೆ ಅವನ ಅಮ್ಮ.

ತನ್ನ ಕಾರ್ಯಕ್ಷೇತ್ರವಾಗಿ ಅವನು ಉಡುಪಿಯನ್ನೇ ಆರಿಸಿಕೊಂಡಿದ್ದ. ಅಲ್ಲಿ ಒಂದು ಬಾಡಿಗೆ ಮನೆ ಮಾಡಿ ತಾಯಿಯನ್ನು ಕರೆದುಕೊಂಡು ಬಂದುದಲ್ಲದೆ, ತಮ್ಮ-ತಂಗಿಯಂದಿರನ್ನೂ ಅಲ್ಲಿಯೇ ಶಾಲೆ-ಕಾಲೇಜುಗಳಿಗೆ ಸೇರಿಸಿದ್ದ. ಉಡುಪಿಯಲ್ಲಿ ವಕೀಲಿ ವೃತ್ತಿ ಆರಂಭಿಸಿದ ಕೂಡಲೆ, ಅವನು ಮಾಡಿದ ಮೊತ್ತ ಮೊದಲ ಕೆಲಸವೆಂದರೆ ಚಿಕ್ಕಪ್ಪನಿಂದ ಆಸ್ತಿಪಾಸ್ತಿಯ ವಿವರಗಳನ್ನು ಪಡೆದುಕೊಂಡುದು. ತಂದೆಯ ಮರಣದ ನಂತರ ಅವರ ಪಾಲಿನ ಆಸ್ತಿಯ ವಿಲೇವಾರಿಯನ್ನು ಚಿಕ್ಕಪ್ಪನೇ ನೋಡುವಂತೆ ನಿರ್ಧರಿಸಲಾಗಿತ್ತು. ಈಗ ಅದು ಕೈಗೆ ಬಂದದ್ದೇ ಅವನಿಗೆ ಎಲ್ಲಿಲ್ಲದ ಶಕ್ತಿ ಬಂದಂತಾಗಿತ್ತು. ಹುಣಸೇಗುಡ್ಡದ ಆಸ್ತಿಯಲ್ಲಿ ಹಾಡಿ-ಕಾಡುಗಳೇ ಇದ್ದವೆಂದು ಅವನಿಗೆ ತಿಳಿದುದು ಆಗಲೇ.

ಪಾಲಿನಲ್ಲಿ ತಮಗೆ ಮೋಸವಾಗಿದೆ ಎಂದು ಚಿಕ್ಕಪ್ಪಂದಿರ ಮೇಲೆ ಮುನಿಸಿಕೊಂಡರೂ, ಅದರಲ್ಲೇ ಸಮಯ ಹಾಳುಮಾಡಲಿಲ್ಲ. ಗುತ್ತಿಗೆಯ ವ್ಯವಹಾರದಲ್ಲಿದ್ದ ಗೆಳೆಯ ಸುರೇಶನ ಸಲಹೆಯಂತೆ ಅಲ್ಲಿದ್ದ ಕೆಲವು ಮರಗಳನ್ನು ಕಡಿದು ಮಾರಾಟ ಮಾಡಿದ. ಅವುಗಳಲ್ಲಿ ಒಂದೆರಡು ಗಂಧದ ಮರಗಳೂ ಇದ್ದುದನ್ನು ನೋಡಿ ಖುಷಿಯಲ್ಲಿ ಅವನಿಗೆ ತಲೆಗೆ ಏರಿದಂತಾಗಿತ್ತು. ಮರಗಳನ್ನು ಕಡಿಸಿ ಟ್ರಕ್ಕುಗಳಲ್ಲಿ ಹಾಕಿ ರಾತೋರಾತ್ರಿ ಸಾಗಿಸುವಾಗ ತಾನೇನೋ ಮಹತ್ತರವಾದುದನ್ನು ಸಾಧಿಸಿದುದರ ಅನುಭವವಾಗತೊಡಗಿತ್ತು.

ಅವನ ಅಮ್ಮ ಮಾತ್ರ, 'ಮರಗಳೊಂದ್ರೆ